ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 6, MAY-JUNE 2021, 111-123
©IIMRD, Mysuru
IIMRD JOURNALS
www.iimrd.com

# ಶಿವಶರಣ ಮಡಿವಾಳ ಮಾಚಿದೇವ : ಒಂದು ವಿಶ್ಲೇಷಣಾತ್ಮಕ ಅಧ್ಯಯನ

ಡಾ. ಆರ್.ವಿ. ಪಾಟೀಲ[1]

**ಪೀಠಿಕೆ**

ಅಚಲ ಕಾಯಕ ನಿಷ್ಠನಾಗಿದ್ದ ಮಡಿವಾಳ ಮಾಚಯ್ಯ ತನ್ನ ಕಾಯಕವೇ ಭಕ್ತಿ, ಜೀವನದುಸಿರು ಎಂದು ನಂಬಿದ್ದರು. ಕಾಯಕದಲ್ಲಿ ನಿಷ್ಠೆಯುಳ್ಳ ಮೈಲಿಗೆಯ ಬಟ್ಟೆಗಳನ್ನು 'ಮಡಿ' ಮಾಡಿ ಮುಟ್ಟಿಸುವ ಕಾಯಕ ಮಡಿವಾಳ ಮಾಚಯ್ಯರವರದಾಗಿತ್ತು. ಮಾಚಯ್ಯರವರು ಮಡಿ ಬಟ್ಟೆ ಹೊತ್ತುಕೊಂಡು 'ವೀರ ಘಂಟೆ' ಬಾರಿಸುತ್ತ ಭಕ್ತರಲ್ಲದವರು ತಮ್ಮನ್ನು ಮುಟ್ಟಬಾರದೆಂದು ನಿಯಮವನ್ನು ವಿಧಿಸಿಕೊಂಡಿದ್ದರು. ಭಕ್ತಿ ಭಾವದಿಂದ ಮಡಿವಾಳಯ್ಯನನ್ನು ಜನರು ಗೌರವಿಸುತ್ತಿದ್ದರು. ಕಾಯಕ ಮಾಡದ –ಸೋಮಾರಿಗಳ–ಬಡವರನ್ನು ಶೋಷಿಸುವ –ಸೋಮಾರಿಗಳ– ದುರ್ಗುಣವುಳ್ಳವರ ಬಟ್ಟೆಗಳನ್ನೆಂದು ಆತ ಮುಟ್ಟದ ಮಾಚಯ್ಯ 'ಅರಸುತನ ಮೇಲಲ್ಲ–ಅಗಸತನ ಕೀಳಲ್ಲ ' ಎಂಬುದನ್ನು ಜಗತ್ತಿಗೆ ಸಾರಿದರು. ಪ್ರಸ್ತುತ ಲೇಖನದಲ್ಲಿ ಮಡಿವಾಳ ಮಾಚಿದೇವರ ಪರಿಚಯ ಹಾಗು ಅವರ ವಚನಗಳ ಸಾರವನ್ನು ವಿಶ್ಲೇಷಿಸಲಾಗಿದೆ. ಲೌಕಿಕ ಬಯಕೆಗಳಿಂದ ದೂರವಿದ್ದು, ನೈತಿಕ ವ್ಯಕ್ತಿತ್ವದಿಂದ ತಾನು ಯಾರು? ಈ ಭೂಮಿಗೆ ಬಂದಿದ್ದು ಏಕೆ? ಇಲ್ಲಿ ಏಕೆ ಬದುಕುತ್ತಿದ್ದೇವೆ? ಭಕ್ತಿ–ಮುಕ್ತಿ ಎಂದರೇನು? ಎಂಬುದನ್ನು ತಿಳಿದು, ಪಂಚಾಚಾರದಿಂದ ಹೇಗೆ ಭಕ್ತಿಯ ತಳಹದಿಯಲ್ಲಿ ಸಮಾಜವನ್ನು ಕಟ್ಟಿ ಬದುಕಬೇಕು, ಶರಣತ್ವ ಪ್ರಾಪ್ತಿಮಾಡಿಕೊಂಡು ಪರಿಪೂರ್ಣತ್ವದೆಡೆಗೆ ಸಾಗುವುದು ಜೊತೆಗೆ ಶರಣತ್ವದ ಸಮಾಜ ಮತ್ತು ತನ್ನತಾ ಅರಿತು ನಿಜಜ್ಞಾನದಲ್ಲಿ ನಿಂದು ಲಿಂಗಾನುಭಾವಿಯಾಗಿ ಅಜ್ಞಾನವಳಿದು ಶರಣ ನಿಷ್ಠನಾಗಿ, ಭವ ಕಳೆದು ಅನುಭಾವ ಉಳಿದು ಶೂನ್ಯತ್ವಕ್ಕೇರಿಸುವ ಮಾರ್ಗವನ್ನು ಅರಿಯುವ ವಿಚಾರಗಳನ್ನು ಈ ಪ್ರಬಂಧದಲ್ಲಿ ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ.

*ಕಾಯದ ಕರಸ್ಥಲದಲ್ಲಿ ಲಿಂಗಸ್ವಾಯತವ ಮಾಡುವೆ*
*ಕ್ರೋಧದ ನಯನದಲ್ಲಿ ಜಂಗಮಸ್ವಾಯತವ ಮಾಡುವೆ*
*ಜಿಹ್ವೆಯ ಕೊನೆಯಲ್ಲಿ ಪ್ರಸಾದಸ್ವಾಯತವ ಮಾಡುವೆ*
*ಇಂತೀ ತ್ರಿವಿಧದಲ್ಲಿ ಸನ್ನಿಹಿತನಾದೆನು ಕಾಣಾ ಕಲಿದೇವಯ್ಯ*

[1] *ಕನ್ನಡ ವಿಭಾಗ, ಜೆ. ಎಸ್. ಎಸ್. ಬನಶಂಕರಿ ಕಲಾ, ವಾಣಿಜ್ಯ ಮತ್ತು ಎಸ್. ಕೆ. ಗುಬ್ಬಿ ವಿಜ್ಞಾನ ಮಹಾವಿದ್ಯಾಲಯ, ವಿದ್ಯಾಗಿರಿ, ಧಾರವಾಡ.*